**ಸಾಕ್ಷಿಯನ್ನು ದಿಃ 12.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 15 ಎಂದು,

ಒಂದು ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.16 ಎಂದು,

ಕ್ಯಾಲ್ಕುಕ್ಲೇಶನ್ ಶೀಟ್‌ಅನ್ನುಹಾಜರು ಪಡಿಸಿದ್ದು ಅದನ್ನು ನಿಪಿ. 17 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬರುವ ಮೊದಲು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಪಿರಿಯಾಪಟ್ಟಣ ಆಸ್ಪತ್ರೆಯಲ್ಲಿ ಅರ್ಜಿದಾರರಿಗೆ ಸಿಮೆಂಟ್ ಪ್ಲಾಸ್ಟರ್ ಹಾಕಿದ್ದರು. Medial malleolar fracture and metatarsal fracture ಆಗಿದ್ದ ಕಾರಣ ಪ್ಲಾಸ್ಟರ್ ಹಾಕಿದ್ದರು. ಆದ ಕಾರಣ ನಮ್ಮ ಬಳಿ ಚಿಕಿತ್ಸೆಯ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಾತ್ಕಲಿಕವಾಗಿ ಪ್ಲಾಸ್ಟರ್ ಹಾಕಿದ್ದರು ಎನ್ನುತ್ತಾರೆ. ಗಾಯಾಳುವಿಗೆ ಆದಂತಹ ಫ್ರಾಕ್ಚರ್ ಪ್ಲಾಸ್ಟರ್ ಹಾಕಿದ್ದಾರೆ ಗುಣಮುಖವಾಗುವಂತಹ ಫ್ರಾಕ್ಚರ್ ಆಗಿತ್ತು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಕೆ ವೈರ್ ಹಾಕಿ ಶಸ್ತ್ರ ಚಿಕಿತ್ಸೆ ಮಾಡಿದ್ದೇನೆ. ಮುಂದುವರೆದ ಚಿಕಿತ್ಸೆಗೆ ಬಗ್ಗೆ ಮಾಹಿತಿ ನೀಡಿ ಬಿಡುಗಡೆ ಮಾಡಿರುತ್ತೇನೆ. ಬಿಡುಗಡೆಯ ನಂತರ 12 ರಿಂದ 15 ಬಾರಿ ಚಿಕಿತ್ಸೆಗೆ ಬಂದಿದ್ದಾರೆ. ಆ ಬಗ್ಗೆ ನಮ್ಮ ಬಳಿ ಇಲ್ಲ. ಗಾಯಾಳು ಬಳಿ ಇರುತ್ತದೆ. ಅರ್ಜಿದಾರರು 14 ವರ್ಷದ ಚಿಕ್ಕ ವಯಸ್ಸಿನವರಾದ ಕಾರಣ ಪ್ರಮಾಣ ಪತ್ರದಲ್ಲಿ ಹೇಳಿರುವ ಸಮಸ್ಯೆಗಳು ಆತ ದೊಡ್ಡವನಾಗುತ್ತಿದ್ದಂತೆ ಕಡಿಮೆ ಆಗುತ್ತದೆ ಎಂದರೆ ಸರಿಯಲ್ಲ. ನಾನು ಹಳೆಯ ಎಕ್ಸರೇ

ಅನ್ನು ಹಾಜರು ಪಡಿಸಿದ್ದೇನೆ. ಇತ್ತೀಚಿನ ಎಕ್ಸರೇ ಅರ್ಜಿದಾರರ ಬಳಿ ಇದೆ. ದಿಃ 17.12.2025 ಕ್ಕೆ ಎಕ್ಸರೇ ತೆಗೆಸಿರುತ್ತೇನೆ. ಇತ್ತೀಚಿನ ಎಕ್ಸರೇಯ ಪ್ರಕಾರ ಮೂಳೆಗಳು ಕೂಡಿಕೊಂಡಿರುವ ಕಾರಣ ಅವರಿಗೆ ಸಹಾಯ ಮಾಡಲು ಸದರಿ ಎಕ್ಸರೇ ಅನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

2. ಅರ್ಜಿದಾರರು ಸಂಪೂರ್ಣ ಗುಣಮುಖರಾಗಿ ಇದ್ದಾರೆ ಎಂದರೆ ಸರಿಯಲ್ಲ. ನ್ಯೂನತೆಯನ್ನು ನಿರ್ಧರಿಸುವಾಗ ಮಾಡಿರುವ ಪರೀಕ್ಷೆಗಳ ಬಗ್ಗೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ. ಕಾಂಪ್ಲಿಕೇಶನ್ ಗೆ ಶೇಕಡ 2 ನೀಡಿದ್ದು ಯಾವ ರೀತಿಯ ಕಾಂಪ್ಲಿಕೇಶನ್ ಎಂದು ವಿವರಿಸಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಪರಿಹಾರಕ್ಕೆ ಸಹಾಯ ಆಗಲಿ ಎಂದು ಶೇಕಡ 27 ರಷ್ಟು ನ್ಯೂನತೆಯನ್ನು ಉತ್ಪ್ರೇಕ್ಷೆಯಿಂದ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ನ್ಯೂನತಾ ದೃಢೀಕರಣ ಪತ್ರ ನೀಡಿಲ್ಲ. ಅರ್ಜಿದಾರರಿಗೆ ಯಾವುದೇ ನ್ಯೂನತೆ ಇಲ್ಲದೇ ಇದ್ದರೂ ಸಹ ಸಹಾಯ ಮಾಡುವ ಉದ್ದೇಶದಿಂದ ಉತ್ಪ್ರೇಕ್ಷೆಯಿಂದ ನ್ಯೂನತೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.